**ಸಾಕ್ಷಿಗೆ ದಿನಾಂಕಃ04-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1, 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ. TNR ವಕೀಲರಿಂದ ::**

ನನ್ನ ತಂದೆಯ ಹೆಸರು ರಾಮಣ್ಣ ಬಿನ್ ವೆಂಕಟಪ್ಪ ಆಗಿರುತ್ತದೆ. ನನ್ನ ತಂದೆಯ ಪೂರ್ಣ ಹೆಸರು ಟಿ ವಿ ರಾಮಣ್ಣ ಆಗಿರುತ್ತದೆ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ನನ್ನ ವಾದ ಪತ್ರದಲ್ಲಿ ನನ್ನ ತಂದೆಯ ಹೆಸರನ್ನು ಟಿ ರಾಮಪ್ಪ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಶಾಲಾ ದಾಖಲಾತಿಗಳನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಗೆ 5 ಜನ ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆಯನ್ನು ನನ್ನ ತಂದೆಯ ಮೂರು ಜನ ಹೆಣ್ಣು ಮಕ್ಕಳಾದ ರತ್ನಮ್ಮ ಲಕ್ಷೀದೇವಿ ಹಾಗೂ ನಾನು ಹೂಡಿರುತ್ತೇವೆ. ಪ್ರಸ್ತುತ ದಾವೆಯನ್ನು ತಿಮ್ಮಕ್ಕ ಹಾಗೂ ಅವರ ಮಕ್ಕಳ ವಿರುದ್ದ ಹೂಡಿರುತ್ತೇವೆ. 1 ನೇ ಪ್ರತಿವಾದಿ ತಿಮ್ಮಕ್ಕ ನನಗೆ ತಿಳಿದಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತು ಪ್ರಸ್ತುತ ವಾದಿಗಳಾದ ನಮ್ಮ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿ ನಮಗೆ ನಮ್ಮ ತಂದೆ ತಾಯಿಯಿಂದ ಬಂದಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ನನ್ನ ತಾಯಿ ಮೃತರಾದ ನಂತರದಲ್ಲಿ ನಮ್ಮ ಹೆಸರಿಗೆ ಬಂದಿರುತ್ತದೆ. ನನ್ನ ತಾಯಿ ಸುಮಾರು 6 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಅದಕ್ಕೂ ಮುಂಚೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಇತ್ತು. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾವು ಅಡಿಕೆ ಹಾಗೂ ರಾಗಿಯನ್ನು ಹಾಕಿರುತ್ತೇವೆ. ನಾವು ಅಡಿಕೆ ತೋಟ ಮಾಡಿ ಈಗ 3 ವರ್ಷ ಆಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾವು ಯಾವುದೇ ಬೆಳೆ ಸಮಿಕ್ಷೆ ಮಾಡಿಸಿರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಬೆಳೆದಿರುವ ಬೆಳೆಗಳಿಗೆ ಸಂಬಂಧಪಟ್ಟಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಸಾಗುವಳಿಯನ್ನು ನಾನು ಹಾಗೂ 2 ನೇ ವಾದಿ ಮಾಡಿಕೊಂಡಿದ್ದು ಫಸಲನ್ನು ವಾದಿಗಳಾದ ನಾವು ಮೂರು ಜನ ಪಡೆಯುತ್ತಿದ್ದೇವೆ.

ದಾವಾ ಶೆಡ್ಯೂಲ್ ಸ್ವತ್ತು ನನ್ನ ತಂದೆಗೆ 1962 ರಲ್ಲಿ ಮಂಜೂರಾತಿ ಆಗಿರುತ್ತದೆ. ಸದರಿ ಮಂಜೂರಾತಿಯ ಸಂಖ್ಯೆ ನನಗೆ ನೆನಪಿಲ್ಲ. ಅದೇ ರೀತಿ ಸದರಿ ಸ್ವತ್ತು ನನ್ನ ತಂದೆಗೆ 1962 ರಲ್ಲಿ ಮಂಜೂರಾಗಿರುತ್ತದೆ. ನಿಪಿ4 ರಲ್ಲಿ ಯಾರ ಹೆಸರು ನಮೂದು ಇರುತ್ತದೆ ಎಂದು ನನಗೆ ನೋಡಿ ಹೇಳಲು ಬರುವುದಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: